OS No. 40/2022

PW-1

**(ಇಂದು ದಿಃ 01-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲು6 ರಿಂದ 8 ನೇ ಪ್ರತಿವಾದಿಯರ ಪರ ಃ ಶ್ರೀ SRP ವಕೀಲರಿಂದಃ**

ನನಗೆ ಸೇಡಂ ಪಟ್ಟಣ ಚೆನ್ನಾಗಿ ಗೊತ್ತು ಎಂದರೆ ಸರಿ. ದಾವಾ ಆಸ್ತಿಯ ರಸ್ತೆಯಲಪಕ್ಕಿ ಒಂದು ಕಲ್ಯಾಣ ಮಂಟಪ ಇದೆ. ಅದು 25 – 30 ವರ್ಷ ಗಳಿಂದ ಇದೆ ಎಂದೆರ ಸರಿ. ನಾನು ಸದರಿ ಕಲ್ಯಾಣ ಮಂಟಪಕ್ಕೆ ಯಾವತ್ತು ಹೋಗಿಲ್ಲ, ಅಲ್ಲಿಃ ಸಾಕಷ್ಟು ಸಮಾರಂಭಾಗಳು ಆಗಿದ್ದು ನಾನು ಹೋಗಿದ್ದೇನೆ ಎಂದರೆ ಸರಿಯಲ್ಲ, ಅದರ ಪಕ್ಷದಲ್ಲಿ ಖಾನಗಡ್ಡ ಟ್ರಸ್ಟ ಕಲ್ಯಾಣ ಮಂಟಪ ಇದೆ ಎಂದರೆ ಸರಿ. ಸದರಿ ಕಲ್ಯಾಣ ಮಂಟಪಕ್ಕೆ ಹೋಗಿದ್ದೇನೆ. ಸದರಿ ರಸ್ತೆಯಲ್ಲಿ ಸಾಕಷ್ಟು ಬಾರಿ ಹೋೇಗು ಬರುವುದು ಮಾಡಿದ್ದೇನೆ ಎಂದರೆ ಸರಿ. ದಾವಾ ಆಸ್ತಿ ಮತ್ತು ಚೆಕ್ ಬಂದಿ ಹೇಳಲು ಬರುವುದಿಲ್ಲ,  ದಾವಾ ಆಸ್ತಿಯನ್ನು 1ನೇ ಪ್ರತಿವಾದಿ ರಾಜಕುಮಾರು ಪಾಟೀಲ ರವರಿಗೆ ಮಾರಾಟ ಮಾಡಿದಳು ಎಂದರೆ ಸರಿ. ಸದರಿ ಸಂಗತಿ ನನಂಗೆ ಮೊದಲು ಗೊತ್ತಿರಲಿಲ್ಲ,  ನನಗೆ ಮಾರಾಟ ಮಾಡಿದ್ದ ಮೊದಲಿನಿಂದ ಗೊತ್ತು ಎಂದರೆ ಸರಿಯಲ್ಲ. ನಾನು ಅಲ್ಲಿ ಹೋದಾಗ ಮೋದಲು ರಾಜಕುಮಾರು ಪಾಟೀಲ ಕಬ್ಜಾದಲ್ಲಿರುವದನ್ನು ನೋಡಿದ್ದೆ ಎಂದರೆ ಸರಿಯಲ್ಲ, ನಂತರ ರಾಜಕುಮಾರ ಪಾಟೀಲ ದಾವಾ ಆೆಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ, ರಾಜಕುಮಾರ ಪಾಟೀಲ್ ಖರೀದಿ ಮಾಡಿದಾಗ ಮಾಳಿಗೆ ಮನೆ ಇತ್ತು ಎಂದರೆ ಸರಿ. ರಾಜಕುಮಾರ ಪಾಟೀಲ 7 ನೇ ಪ್ರತಿವಾದಿಗೆ ಮಾರಾಟ  ಮಾಡಿದ ಮೇಲೆ 7 ನೇ ಪ್ರತಿವಾದಿ ಮಾಳಿಗೆ ಮನೆಯನ್ನು ಕೆಡವಿದರು ಎಂದರೆ ಸರಿ. ನಂತರ ಹೊಸ ಕಟ್ಟಡ ಕಟ್ಟಿದರು ಎಂದರೆ ಸರಿ. ರಾಜಕುಮಾರ ಪಾಟೀಲ್ ಖ್ಬರೀದಿ ಮಾಡಿದಾಗ ಮತ್ತು 7ನೇ  ಪ್ರತಿವಾದಿಗೆ ಮಾರಾಟ ಮಾಡಿದಾಗ ನಾನು ತಖಾರಾರು

ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರಲಿಲ್ಲ ಕಾರಣ ತಕರಾರು ಮಾಡಿಲ್ಲ ಎಂದು ಹೇಳುತ್ತಾರೆ.

ನಾನು ಲಚಮಯ್ಯನ ಮಗ ಅಲ್ಲ ಕಾರಣ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ, ನನ್ನ ತಂದೆ ಬದುಕಿದ್ದಾಗ ವಿಲ್ ಪತ್ರ ಬರೆದಿದ್ದು ಅದರಲ್ಲಿ ನನಗೆ ಒಬ್ಬಳೇ ಮಗಳು ಎಂದು ಹೇಳಿ ಬರೆಸಿದ್ದಾರೆ ಎಂದರೆ ಸರಿಯಲ್ಲ, ನಾನು ಲಚಮಯ್ಯ ಮತ್ತು ಆಶಮ್ಮನ ಮಗ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ, ದಾವಾ ಆಸ್ತಿಯಲ್ಲಿ ಮುಂಚೆ ರಾಜಕುಮಾರ ಪಾಟೀಲ್ ಕಬ್ಜಾದಲ್ಲಿದ್ದರು ನಂತರ 7ನೇ ಪ್ರತಿವಾದಿ ಕಬ್ಜಾದಲ್ಲಿದ್ದು ನಾನು ಯಾವತ್ತು ಕಬ್ಜಾದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ರಾಜಮ್ಮ 2006 ರಲ್ಲಿ ರಾಜಕುಮಾರ ಪಾಟೀಲರವರಿಗೆ ಖರೀದಿ ನೀಡಿದಾಗಿನಿಂದ ಅವರೇ ಕಬ್ಜಾದಲ್ಲಿದ್ದರು ನಂತರ 7ನೇ ಪ್ರತಿವಾದಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ, 7ನೇ ಪ್ರತಿವಾದಿ ಹೊಸ ಕಟ್ಟಡ ಕಟ್ಟಿದ್ದು ಅವರೇ ಕಬ್ಜಾದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಅಲ್ಲಿ ಕಂಪ್ಯೂಟರ ಅಂಗಡಿ ಇದ್ದು ಅದನ್ನು 7ನೇ ಪ್ರತಿವಾದಿ ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ,

ನಾನು ದಾವಾ ಆಸ್ತಿಯ ಕರಾ ಪಾವತಿ ಮಾಡಿಲ್ಲ, ನಾನು ಟಿ.ಎಂ.ಸಿ. ಗೆ ಹೋಗಿ ದಾವಾ ಆಸ್ತಿಯ ದಾಖಲಾತಿ ಪರಿಶೀಲನೆ ಮಾಡಿಲ್ಲ . ರಾಜಮ್ಮ 2007 ರಲ್ಲಿ 6ನೇ ಪ್ರತಿವಾದಿ ಗೆ ಖರೀದಿ ಪತ್ರ ಬರೆದುಕಕೊಟ್ಟಾಗ ಖರೀದಿ ಪತ್ರಕ್ಕೆ ರಾಜಮ್ಮ , ಬೀಮಶಪ್ಪ , ಮಹಾದೇವಿ , ಚಿನ್ನಮ್ಮ , ಸಾಯಪ್ಪ ಸಹಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಮಾರಾಟ ಮಾಡುವ ಹಕ್ಕು ಇಲ್ಲ ಎಂದು ಹೇಳುತ್ತಾರೆ. ದಿನಾಂಕ 09.05.2022 ಕ್ಕೆ ಖರೀದಿ ಪತ್ರಗಳ ಬಗ್ಗೆ ನನಗೆ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

1ನೇ ಪ್ರತಿವಾದಿ ತನ್ನ ತಖಾರಾರಿನಲ್ಲಿ ನಾನು ಅವಳಿಗೆ ಸಂಬಂಧಿ ಅಲ್ಲ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

7ನೇ ಪ್ರತಿವಾದಿ ಖರೀದಿ ಪಡೆದುಕೊಂಡ ನಂತರ ದಾವಾ ಆಸ್ತಿಯನ್ನು ತನ್ನ ಗಂಡನಿಗೆ ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ದಾಖಲಾದ ನಂತರ ನಾನು ಟಿ. ಎಂ. ಸಿ ಗೆ ಹೋಗಿ ದಾವಾ ಸ್ವತ್ತಿನ ದಾಖಲಾತಿ ಪರಿಶೀಲನೆ ಮಾಡಿಲ್ಲ.  ನನಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ರಾಜಕುಮಾರ ಪಾಟೀಲ್ ಜೋತೆ ಇರುತ್ತಾರೆ ಎಂದರೆ ಸರಿ. ಕಾರಣ ರಾಜಕುಮಾರ ಪಾಟೀಲಿ ದಾವಾ ಸ್ವತ್ತನ್ನು ಖರೀದಿ ಮಾಡಿದ ಸಂಗತಿ ನನಗೆ ಮಾದಲಿನಿಂದ ಗೊತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**